ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಬೆಳಗಾವಿ ವೃತ್ತ ಅರಣ್ಯ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಇ) ಅಕ್ರಮಗಳ ಕುರಿತು ವಿವರವಾದ ತನಿಖೆ ನಡೆಸಲು ಉನ್ನತ ಮಟ್ಟದ ಅಧಿಕಾರಿಯವರನ್ನು ನೇಮಿಸಲಾಗಿದ್ದು, ಅವರಿಂದ ತನಿಖಾ ವರದಿ ಪ್ರಾಪ್ತವಾದ ನಂತರ ಸಂಬಂಧಪಟ್ಟ ತಪ್ಪಿತಸ್ಥ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು.

ಈ) ಅಕ್ರಮ ಹಾಗೂ ಅವ್ಯವಹಾರಗಳ ಬಗ್ಗೆ ತಪ್ಪಿತಸ್ಥ ಅಧಿಕಾರಿ/ಸಿಬ್ಬಂದಿಯವರ ವಿರುದ್ಧ ಅವಶ್ಯವಿದ್ದಲ್ಲಿ ಇಲಾಖಾ ವಿಚಾರಣೆ ನಡೆಸಿ, ಆರೋಪಗಳು ಸಾಬೀತಾದ ಪಕ್ಷದಲ್ಲಿ ನಿಯಮಾನುಸಾರ ಸೂಕ್ತ ದಂಡನೆಯನ್ನು ವಿಧಿಸುವ ಬಗ್ಗೆ ಪರಿಶೀಲಿಸಬೇಕಾಗುವುದು.

718(1589) ಶ್ರೀ ದಿಗಂಬರ್ ಯಶವಂತ್‌ರಾವ್ ಪಾಟೀಲ್ (ಖಾನಾಪುರ) : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಖಾನಾಪುರ ತಾಲ್ಲೂಕಿನ ಅರಣ್ಯ ವಲಯಗಳಲ್ಲಿರುವ ಆನೆಗಳ ಸಂಖ್ಯೆ ಎಷ್ಟು;

ಆ) ಸದರಿ ಪ್ರದೇಶಗಳಲ್ಲಿರುವ ಗ್ರಾಮಗಳಲ್ಲಿ ಆನೆಗಳ ಹಾವಳಿಯಿಂದ ಮೃತರಾದವರ ಸಂಖ್ಯೆ ಎಷ್ಟು;

ಇ) ಆನೆಗಳ ಹಾವಳಿಯನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ(ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಬೆಳಗಾವಿ ವಿಭಾಗದ ಖಾನಾಪುರ ವಲಯದ ಕಟಗಾಳಿ ಅರಣ್ಯ ಕ್ಷೇತ್ರದಲ್ಲಿ 1ಳ0 ಆನೆಗಳು ಇರುತ್ತವೆ.

ಆ) ಈ ವಿಭಾಗದಲ್ಲಿ ಕಳೆದ ಮೂರು ವರ್ಷಗಳಲ್ಲಿ ಆನೆಗಳ ಹಾವಳಿಯಿಂದ ಮೃತರಾದ ಜನರ ಸಂಖ್ಯೆ ಕೆಳಗಿನಂತೆ ಇದೆ.

ಕ್ರ. ಸಂ.	ವರ್ಷ	ಮೃತರಾದವರ ಸಂಖ್ಯೆ
1	2002–03	–
2	2003–04	3
3	2004–05 31/12 ರವರೆಗೆ	1
	ಒಟ್ಟು	4

ಇ) ಆನೆಗಳ ಹಾವಳಿ ಹೆಚ್ಚಿಗೆ ಇದ್ದ ಪ್ರದೇಶಗಳಲ್ಲಿ ಆನೆ ನಿರೋಧಕ ಕಂದಕಗಳನ್ನು ತೋಡಲಾಗಿದೆ. ಆನೆಗಳು ರೈತರ ಜಮೀನುಗಳಲ್ಲಿ ನುಗ್ಗದಂತೆ ಸಿಬ್ಬಂದಿಗಳೊಂದಿಗೆ ಮತ್ತು ಗ್ರಾಮಸ್ಥರ ಸಹಾಯದಿಂದ ಸದರಿ ಆನೆಗಳನ್ನು ಸಮೀಪದ ಅರಣ್ಯ ಪ್ರದೇಶಕ್ಕೆ ಓಡಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಮತ್ತು ಆನೆಗಳನ್ನು ಓಡಿಸಲು ಪಟಾಕಿಗಳನ್ನು ಸಿಡಿಸಿ, ತಮಟೆ ಭಾರಿಸಿ ಗ್ರಾಮಸ್ಥರ ಸಹಾಯದಿಂದ ಓಡಿಸಲು ಕ್ರಮ ಕೈಗೊಳ್ಳಲಾಗಿದೆ.

720(1371) ಶ್ರೀ ಈಶ್ವರಪ್ಪ ಕೆ.ಎಸ್.(ಶಿವಮೊಗ್ಗ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಭಾಗ್ಯಜ್ಯೋತಿ ಯೋಜನೆಯಡಿಯಲ್ಲಿ ಬಡವರಿಗೆ ವಿದ್ಯುತ್ತನ್ನು ಉಚಿತವಾಗಿ ಕೊಡಲು ಸಾಧ್ಯವೇ;

ಆ) ವಿದ್ಯುತ್ ಬಿಲ್ಲನ್ನು ಪಾವತಿಸಲು ಬಾಕಿ ಉಳಿದಿರುವ ಭಾಗ್ಯಜ್ಯೋತಿ ಫಲಾನುಭವಿದಾರರಾದ ಬಡವರ ವಿದ್ಯುತ್ ಸಂಪರ್ಕವನ್ನು ತೆಗೆಯಲು ಆದೇಶ ಹೊರಡಿಸಲಾಗಿದೆಯೇ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಭಾಗ್ಯಜ್ಯೋತಿ/ಕುಟೀರ ಜ್ಯೋತಿ ಯೋಜನೆಗಳಡಿಯಲ್ಲಿ ವಿದ್ಯುತ್ ಸಂಪರ್ಕ ಪಡೆದಿರುವ ಬಡವರಿಗೆ ಮಾಹೆಯಾನ 18 ಯೂನಿಟ್ಟುಗಳವರೆಗೆ ಉಚಿತ ವಿದ್ಯುತ್ತನ್ನು ಸರಬರಾಜು ಮಾಡುವ ಬಗ್ಗೆ ಒಂದು ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸುತ್ತಿದೆ.

ಆ) ಭಾಗ್ಯ ಜ್ಯೋತಿ/ಕುಟೀರ ಜ್ಯೋತಿ ಸ್ಥಾವರಗಳಿಗೆ ವಿಧಿಸಲಾಗುತ್ತಿರುವ ವಿದ್ಯುತ್ ದರ ಮಾಜಿಯಾನ ಕೇವಲ ರೂ. 30.00 ಮಾತ್ರ ಪ್ರತಿ ಯೂನಿಟ್ಟು ವಿದ್ಯುತ್ ಸರಬರಾಜಿಗೆ ತಗಲುವ ವೆಚ್ಚ ರೂ. 3.73. ಆದರೆ, ಈ ದರವನ್ನು ಭಾಗ್ಯ ಜ್ಯೋತಿ/ಕುಟೀರ ಜ್ಯೋತಿ ಫಲಾನುಭವಿಗಳಿಗೆ ವಿಧಿಸದೆಯೇಸ, ಪ್ರತಿ ಯೂನಿಟ್ಟಿಗೆ ರೂ.1.66 ಸಹಾಯ ಧನವನ್ನು ಸರ್ಕಾರವು ನೀಡುತ್ತಿದೆ. ಈ ಹಿನ್ನೆಲೆಯಲ್ಲಿ ಭಾಗ್ಯ ಜ್ಯೋತಿ/ಕುಟೀರ ಜ್ಯೋತಿ ಫಲಾನುಭವಿಗಳು ತಮಗೆ ವಿಧಿಸಲಾಗುತ್ತಿರುವ ಕಡಿಮೆ ದರವನ್ನು ಪಾವತಿಸಿ, ವಿದ್ಯುತ್ ಸರಬರಾಜು ಕಂಪನಿಗಳೊಂದಿಗೆ ಸಹಕರಿಸಬೇಕಾಗಿರುತ್ತದೆ. ಅಲ್ಲದೇ, ವಿದ್ಯುತ್ ಬಾಕಿಯನ್ನು ಕಂತುಗಳ ಮೂಲಕ ಪಾವತಿಸಲು ಸಹ ಅನುಕೂಲವನ್ನು ಕಲ್ಪಿಸಲಾಗಿರುತ್ತದೆ. ಭಾಗ್ಯಜ್ಯೋತಿ/ಕುಟೀರ ಜ್ಯೋತಿ ಫಲಾನುಭವಿಗಳಿಂದಲೂ ಸಹ ಕನಿಷ್ಠ ಶೇಕಡ 25 ರಷ್ಟು ವಸೂಲಾತಿಯನ್ನು ಮಾಡುವ ದೃಷ್ಟಿಯಿಂದ, ಹೆಚ್ಚಿನ ಬಾಕಿ ಹೊಂದಿರುವ ಭಾಗ್ಯ ಜ್ಯೋತಿ/ ಕುಟೀರ ಜ್ಯೋತಿ ಸ್ಥಾವರಗಳು ಕಂತಿನ ಸೌಲಭ್ಯವನ್ನು ಪಡೆದುಕೊಂಡರೂ ಸಹ ಹಣವನ್ನು ಪಾವತಿಸದೇ ಇದ್ದಲ್ಲಿ, ಅನಿವಾರ್ಯ ಕ್ರಮವಾಗಿ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಲಾಗುತ್ತದೆ.

722(1341) : ಶ್ರೀ ಈಶ್ವರಪ್ಪ ಕೆ.ಎಸ್ (ಶಿವಮೊಗ್ಗ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಆರಾಧನಾ ಯೋಜನೆ ಜಾರಿಗೆ ಬರುತ್ತದೆಯೇ;

ಆ) ಒಂದು ವಿಧಾನ ಸಭಾ ಕ್ಷೇತ್ರಕ್ಕೆ ಎಷ್ಟು ಹಣ ಮೀಸಲಿಡಲಾಗುವುದು?

ಶ್ರೀ ಎಂ.ಪಿ. ಪ್ರಕಾಶ್(ಕಂದಾಯ ಸಚಿವರು)

ಅ) ಆರಾಧನಾ ಯೋಜನೆ 1991–1992ನೇ ಸಾಲಿನಿಂದ ಜಾರಿಯಲ್ಲಿದೆ.

ಆ) ಆರಾಧನಾ ಯೋಜನೆಗೆ ಆಯವ್ಯಯದಲ್ಲಿ ಒದಗಿಸುವ ಅನುದಾನವನ್ನು ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ಸಮನಾಗಿ ಹಂಚಲಾಗುವುದು. 2004–05ನೇ ಸಾಲಿಗೆ ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ರೂ. 2.82 ಲಕ್ಷಗಳಂತೆ 224 ವಿಧಾನ ಸಭಾ ಕ್ಷೇತ್ರಗಳಿಗೆ ರೂ. 6,31,68,000–00ಗಳನ್ನು ಮಂಜೂರು ಮಾಡಿದೆ.

723(216) : ಶ್ರೀ ಗಂಗಾಧರ್ ನಾಗೇಶ್ ಭಟ್(ಕಾರವಾರ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?